ಡಾಕ್ಟರಿಕೆ ಓದಿದರೆ ಜನ ದೇವರಂತೆ ನೋಡ್ತಾರೆಂದು, ತಲೆ ಮೇಲಿಟ್ಟುಕೊಂಡು ಪೂಜೆ ಮಾಡ್ತಾರೆಂದು ನಮ್ಮಪ್ಪನಿಗೇ ಅನಿಸಿತೋ ಅಥವಾ ಯಾರಾದರೂ ಹೇಳಿದರೋ ನನಗ್ಗೊತ್ತಿಲ್ಲ. ಒಟ್ಟಾರೆ ಆತನಿಗೆ ಡಾಕ್ಟರಿಕೆ ಓದಬೇಕೆನಿಸಿತು. ಆದರೆ ಅದಕ್ಕೆ ಬೇಕಾದ ದುಡ್ಡು ನಮ್ಮ ತಾತನ ಹತ್ತಿರ ಇಲ್ಲ. ಮೈಯೊಳಗೆ ಕಸುವು ಇನ್ನೂ ಇಲ್ಲ. ಎಂಬಿಬಿಎಸ್ ಓದೋದೆಂದರೆ ಮಹಾರಾಜರ ಕೆಲಸವೇ ಹೊರತು ಹಜಾಮರ ಕೆಲಸವೇನಲ್ಲವಲ್ಲ. ಆದರೆ ನಮ್ಮಪ್ಪ ಪಟ್ಟು ಬಿಡಲಿಲ್ಲ. ಏನಂದುಕೊಂಡನೋ ಏನೋ ನೇರವಾಗಿ ಮದ್ರಾಸಿಗೆ ಹೋಗಿ ಅಲ್ಲೇ ಜಿಸಿಐಎಮ್ ಕೋರ್ಸಿಗೆ ಸೇರಿಕೊಂಡ.

ಯುನಾನಿ, ಆಯುರ್ವೇದ ಇನ್ನೂ ಅದರಂಥ ಇಂಡಿಜಿನಸ್ ಮೆಡಿಸಿನ್ ಬಗ್ಗೆ ಕಲಿಸೋ ಕೋರ್ಸು ಅದು. ಡಿಪ್ಲೋಮಾಕ್ಕೆ ಸಮಾನವಾದುದು. ಆದರೆ ನಮ್ಮ ತಂದೆಗೆ ಅದು ಸಾಕಾಯ್ತು. ಆತನಿಗೆ ಬೇಕಾದ ಡಾಕ್ಟರ್ ಪದವಿಯನ್ನು ಅದು ಆತನ ಕೈಗೆ ಕೊಟ್ಟಿತು. ಆದರೆ ನಮ್ಮ ತಂದೆ ಅಷ್ಟಕ್ಕೇ ಬಿಡಲಿಲ್ಲ. ಪ್ರಾಕ್ಟೀಸಿಗೆ ತಾನು ಓದಿದ ಆಯುರ್ವೇದ ಮಾತ್ರವೇ ಸಾಕಾಗುವುದಿಲ್ಲವೆಂದು ಅಗತ್ಯ ಬಿದ್ದಾಗ ಇರಲಿಕ್ಕೆ ಅಲೋಪತಿ ಕೂಡ ಕಲಿಯಬೇಕೆಂದು ಆ ದಿನಗಳಲ್ಲೇ ಗ್ರಹಿಸಿದ ಆತ. ಅದಕ್ಕಾಗಿ ಮೂರು ವರ್ಷಗಳ ಕಾಲ ಮದ್ರಾಸಿನಲ್ಲೇ ಕೆಲಸ ಮಾಡಿ ಆಮೇಲೆ ನಮ್ಮೂರಿಗೆ ವಾಪಸು ಬಂದು ಪ್ರಾಕ್ಟೀಸು ಪ್ರಾರಂಭಿಸಿದನಂತೆ.

ತುಂಬಾ ಲಕ್ಷಣವಾಗಿ ಇರೋನು. ಊಹಿಸಲೂ ಆಗದಷ್ಟು ಚೆಂದವಾಗಿ ನಗೋನು. ಆ ನಗುವಿಂದಲೇ ರೋಗಿಗಳಿಗೆ ಅರ್ಧ ಧೈರ್ಯ ಹೇಳಿಬಿಡ್ತಾನೇನೋ ಅನಿಸೋದು ಆ ನಗು ನೋಡಿದರೆ. ಅಂಥ ನಮ್ಮಪ್ಪ ನನ್ನ ಪಾಲಿನ ಆದರ್ಶ. ಚಿಕ್ಕಂದಿನಿಂದಲೂ ನನಗೆ ಆತನೆಂದರೆ ಆರಾಧನೆ. ಆತನಂತೆಯೇ ಡಾಕ್ಟರ್ ಆಗಬೇಕೆಂದು ಅದೂ ಎಂಬಿಬಿಎಸ್ ಡಾಕ್ಟರ್ ಆಗಬೇಕೆಂಬ ಆಸೆ. ಆತ ಓದಲಾಗದ್ದನ್ನು ನಾನಾದರೂ ಓದಬೇಕೆಂಬ ಛಲ. ಅದರಿಂದಾಗಿ ಓದು ಓದು ಓದು ಅದೇ ಕೆಲಸವಾಗಿತ್ತು ನನಗೆ. ಆದರೆ ದುರದೃಷ್ಟ ನಾನು ಡಾಕ್ಟರ್ ಆಗಿದ್ದನ್ನು ನಮ್ಮಪ್ಪ ನೋಡಲೇ ಇಲ್ಲ. ನಾನು ಫೈನಲ್ ಇಯರ್‌ನಲ್ಲಿದ್ದಾಗಲೇ ಹೋಗಿಬಿಟ್ಟರು...'

ತಂದೆಯ ನೆನಪುಗಳು ಸುತ್ತ ಮುತ್ತಿಕೊಂಡಿವೆ ಎಂಬಂತೆ ಸ್ವಲ್ಪ ಹೊತ್ತು ಮೌನವಾಗಿದ್ದು ಬಿಟ್ಟಳಾಕೆ.

ಅಷ್ಟೊತ್ತಿಗೆ ನಾನು ಅವರ ಊರು ಸೇರಿ ಅವರ ಅಪ್ಪನ ಕತೆಯೊಳಗೆ ಲೀನನಾಗಿಬಿಟ್ಟಿದ್ದೆ. ಆಕೆಯ ಮುಂದಿನ ಮಾತುಗಳಿಗಾಗಿ ಎದುರು ನೋಡ್ತಾ ಇದ್ದೆ.

ಆಕೆ ಸಾವರಿಸಿಕೊಂಡು ನುಡಿದಳು:

'ಬದುಕಿದಷ್ಟು ಕಾಲ ನಮ್ಮ ತಂದೆ ಸುಖವಾಗಿ ಬದುಕಿದರು. ಜನ ಅವರನ್ನು ತಲೆ ಮೇಲಿಟ್ಟುಕೊಂಡು ನೋಡಿಕೊಂಡರು. ಡಾಕ್ಟರಪ್ಪ ಡಾಕ್ಟರಪ್ಪ ಅಂತ ಎಷ್ಟೋ ಮರ್ಯಾದೆ ಕೊಟ್ಟರು. ನಮ್ಮ ತಂದೆಯವರ ಜೀವನ ಸುಖವಾಗಿ, ಪ್ರಶಾಂತವಾಗಿ ಈ ಪ್ರೀತಿ, ಆದರ, ವೃತ್ತಿಯಲ್ಲಿ ಅವರು ಸಾಧಿಸಿದ ಆತ್ಮತೃಪ್ತಿ ಮುಂತಾದುವೇ ಕಾರಣ ಅಂತ ನಾನಂದುಕೊಳ್ಳುತ್ತಿದ್ದೆ. ನಾನು ಕೂಡ ದೊಡ್ಡವಳಾಗಿ ಡಾಕ್ಟರಾದ ಮೇಲೆ ಅವರಂತೆ ಹಾಯಾಗಿ ಪ್ರಶಾಂತವಾಗಿ ಸ್ಯಾಟಿಸ್‌ಫ್ಯಾಕ್ಷನಿಂದ ಬದುಕಿದರೆ ಸಾಕು ಅಂದುಕೊಳ್ಳುತ್ತಿದ್ದೆ.

ಆದರೆ ಅದೆಲ್ಲಾ ಗತಕಾಲ. ನನ್ನ ಅಜ್ಞಾನ. ನಮ್ಮ ಅಪ್ಪನನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ನಾನು ಪೂರ್ತಿಯಾಗಿ ಸೋತುಬಿಟ್ಟೆ ಅಂತ ಆಮೇಲೆ ತುಂಬಾ ಸಮಯದ ನಂತರ ನನಗರ್ಥವಾಯಿತು. ಅದರ ಫಲಿತಾಂಶ ಅನುಭವಕ್ಕೆ ಬರದ ಹೊರತು ಅದು ಎಂಥ ದೊಡ್ಡ